ದಿನಾಂಕಃ 25-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ವಾದಿ ಪರ ವಕೀಲರಿಂದ,

1) ನಾನು ಒಂಭತ್ತನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ವಾದಿ ನನಗೆ ಪರಿಚಯ ಇರುವುದಿಲ್ಲ. ವಾದಿಯು ಈ ದಾವೆಯನ್ನು ಮನೆಯ ಆಸ್ತಿ ಬಗ್ಗೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿವರಗಳು ನನಗೆ ತಿಳಿದಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದಾಗಿರುವುದಿಲ್ಲ.

2) ನಾನು ಮತ್ತು 1 ನೇ ಪ್ರತಿವಾದಿ ವಾದಿ ಪರವಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದು ಹೇಳಿ ದಿಃ 05-08-2016 ರಂದು ನೊಂದಾಯಿತ ಕ್ರಯ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರಕ್ಕೆ ನಾನು ಮತ್ತು 1 ನೇ ಪ್ರತಿವಾದಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಗೆ ಅವರ ತಂದೆಯ ಕಡೆಯಿಂದ ಬಂದಿರುತ್ತದೆ. ಶ್ರೀನಿವಾಸ್ ಎಂ ಟಿ ಎಂಬುವವರು ನನ್ನ ಸಹೋದರ.

3) ನಿಡಿ 5 ದಾಖಲೆಯನ್ನು ನಾಗರಾಜು ರವರ ಬಳಿ ನಾಲ್ಕು ಲಕ್ಷ ಸಾಲ ಪಡೆದುಕೊಂಡಿದ್ದು ಸದರಿ ಹಣವನ್ನು ಮರುಪಾವತಿ ಮಾಡಿದ್ದೇವೆ ಎಂದು ತೋರಿಸಲು ಹಾಜರುಪಡಿಸಿರುತ್ತೇವೆ. ವಾದಿಗೆ ನಾಗರಾಜು ರವರ ಮೂಲಕ ಯಾವುದೇ ಹಣ ಮರುಪಾವತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ